ಮಾಡಲಾಗುತ್ತಿದೆ. ಎಲ್ಲಾ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿಗೆ ಮೀಟರ್‌ಗಳನ್ನು ಅಳವಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ) ವಿದ್ಯುತ್ ಸರಬರಾಜು ಕಂಪನಿಗಳು ವಾಣಿಜ್ಯ ದೃಷ್ಟಿ ಹಾಗೂ ಉತ್ತರದಾಯತ್ವವಾಗಿ ಕೆಲಸ ಮಾಡಿ ವಾಣಿಜ್ಯ ನಷ್ಟವನ್ನು ತಗ್ಗಿಸಲು ಈ ಕೆಳಗಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ.

1. 11 ಕೆ.ವಿ. ಫೀಡರುಗಳ ಎನರ್ಜಿ ಆಡಿಟ್ ಮಾಡುವುದು.
2. ಎಲ್ಲಾ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳಿಗೆ ಮೀಟರ್‌ಗಳನ್ನು ಅಳವಡಿಸಿ, ಎನರ್ಜಿ ಆಡಿಟ್ ಮಾಡುವುದು.
3. ಹೊಸ 11 ಕೆ.ವಿ. ಫೀಡರ್‌ಗಳನ್ನು ನಿರ್ಮಾಣ ಮಾಡುವುದು.
4. ಹೊಸ ಅಧಿಕ ವಿತರಣಾ ಪರಿವರ್ತಕಗಳನ್ನು ಅಳವಡಿಸುವುದು.
5. 11 ಕೆ.ವಿ. ಮಾರ್ಗಗಳ ತಂತಿಗಳನ್ನು ಹೆಚ್ಚಿನ ಸಾಮರ್ಥ್ಯದ ತಂತಿಗಳಿಂದ ಉನ್ನತೀಕರಿಸುವುದು.
6. ರೂರಲ್ ಲೋಡ್ ಮ್ಯಾನೇಜ್‌ಮೆಂಟ್ ಸ್ಕೀಂ ನ್ನು ಅನುಷ್ಠಾನಗೊಳಿಸುವುದು.
7. ಎ.ಪಿ.ಡಿ.ಆರ್.ಪಿ. ಯೋಜನೆಯನ್ನು ಕಾರ್ಯಗತಗೊಳಿಸುವುದು.
8. ಎಲ್.ಟಿ. ಪರೀಕ್ಷಣಾ ತಂಡಗಳನ್ನು ರಚಿಸಿ, ಮಾಪಕ ಪರಿಶೋಧನೆ ಕಾರ್ಯವನ್ನು ನಿರ್ವಹಿಸುವುದು.
9. ವಿದ್ಯುತ್ ಸೋರಿಕೆಯನ್ನು ತಡೆಗಟ್ಟಲು ಜಾಗೃತ ದಳವನ್ನು ರಚಿಸಿ, ಪ್ರಕರಣಗಳನ್ನು ದಾಖಲಿಸಿ ಕಾನೂನು ರೀತ್ಯಾ ಕ್ರಮ ಜರುಗಿಸುವುದು.

2112 (2282) ಶ್ರೀ ಕೃಷ್ಣ ಪಾಲೇಮಾರ್ .ಜೆ. (ಸುರತ್ಕಲ್): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುದುರೆಮುಖ ರಾಷ್ಟ್ರೀಯ ಉದ್ಯಾನವನ ಮತ್ತು ಸುತ್ತಮುತ್ತಲಿರುವ ಪ್ರದೇಶದಲ್ಲಿ ನಿರ್ವಸಿತರಿಗೆ ಪಟ್ಟಾ ಮಂಜೂರು ಮಾಡುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹೌದಾದಲ್ಲಿ ಆ ಕುರಿತಾದ ವಿವರಗಳೇನು;

ಇ) ಸದರಿ ಸೌಲಭ್ಯವನ್ನು ಎಷ್ಟು ಜನ ಅರ್ಹ ಫಲಾನುಭವಿಗಳಿಗೆ ಒದಗಿಸಿಕೊಂಡು ಸರ್ಕಾರ ನಿರ್ಧರಿಸಿದೆ;

ಈ) ಕುದುರೆಮುಖ ಅರಣ್ಯ ಪ್ರದೇಶದಲ್ಲಿರುವ ಆದಿವಾಸಿಗಳಿಗೆ ಪುನರ್ ವಸತಿ ಸೌಲಭ್ಯ ಒದಗಿಸಿಕೊಡುವ ಕುರಿತಾದ ಸರ್ಕಾರದ ಯೋಜನೆಯ ವಿವರಗಳೇನು?

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು)

ಅ) ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಕಂದಾಯ ಭೂಮಿ (ರೆವಿನ್ಯೂ ಇನ್‌ಕ್ಲೋಸರ್) ಯಲ್ಲಿ ಅನಧಿಕೃತ ಸಾಗುವಳಿ ಮತ್ತು ಅನಧಿಕೃತ ವಾಸದ ಮನೆ ನಿರ್ಮಾಣ

ಮಾಡಿರುವುದನ್ನು ಕರ್ನಾಟಕ ಭೂ ಕಂದಾಯ ಕಾಯಿದೆಯ ಕಲಂ 94–ಬಿ ಮತ್ತು 94–ಸಿ ಮೇರೆಗೆ ಮಾತ್ರ ಸಕ್ರಮಗೊಳಿಸಲು ಉದ್ದೇಶಿಸಲಾಗಿದೆ.

ಆ) ಉದ್ಯಾನವನ ವ್ಯಾಪ್ತಿಯ ಕಂದಾಯ ಭೂಮಿ (ರೆವಿನ್ಯೂ ಇನ್‌ಕ್ಲೋಸರ್) ಯಲ್ಲಿನ ಅನಧಿಕೃತ ಸಾಗುವಳಿ ಹಾಗೂ ಅನಧಿಕೃತ ವಾಸದ ಮನೆ ನಿರ್ಮಾಣಗಳನ್ನು ಸರ್ವೆ ಮೂಲಕ ಗುರುತಿಸಲಾಗಿದ್ದು, ವಿವರಗಳು ಕೆಳಗಿನಂತಿದೆ.

ತಾಲ್ಲೂಕು	ಅನಧಿಕೃತ ಸಾಗುವಳಿ		ಅನಧಿಕೃತ ಮನೆ ನಿರ್ಮಾಣ		ಒಟ್ಟು	
	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
ಶೃಂಗೇರಿ	209	184–10	100	7–38	309	192–08
ಮೂಡಿಗೆರೆ	314	437–19	55	2–21	369	440–00
ಕೊಪ್ಪ	120	161–30	18	0–18	138	162–08
ಒಟ್ಟು	**643**	**783–19**	**173**	**10–37**	**816**	**794–16**

ಉದ್ಯಾನವನ ವ್ಯಾಪ್ತಿಯ ಅರಣ್ಯ ಇಲಾಖೆಯ ವರ್ಗಾವಣೆ ಮಾಡಿರುವ ಆದರೆ ಈವರೆಗೆ ಮೀಸಲು ಅರಣ್ಯವೆಂದು ಘೋಷಣೆಯಾಗದಿರುವ ಜಮೀನುಗಳಲ್ಲಿನ ಅನಧಿಕೃತ ಸಗುವಳಿ ಹಾಗೂ ಅನಧಿಕೃತ ನಿರ್ಮಾಣಗಳ (ಮನೆ) ವಿವರ.

ತಾಲ್ಲೂಕು	ಅನಧಿಕೃತ ಸಾಗುವಳಿ		ಅನಧಿಕೃತ ಮನೆ ನಿರ್ಮಾಣ		ಒಟ್ಟು	
	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
ಶೃಂಗೇರಿ	173	162–30	128	7–20	301	170–10
ಮೂಡಿಗೆರೆ	40	111–36	15	0–30	55	112–26
ಕೊಪ್ಪ	22	35–23	–	–	22	35–23
ಒಟ್ಟು	**235**	**310–09**	**143**	**8–10**	**378**	**318–19**

ಅರಣ್ಯ ಇಲಾಖೆಗೆ ವರ್ಗಾವಣೆಯಾಗಿರುವ ಜಮೀನುಗಳನ್ನು ಅರಣ್ಯ ಕಾಯಿದೆ ಮೇರೆಗೆ ಮೀಸಲು ಅರಣ್ಯ ರಚನೆಗೆ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಒಟ್ಟು 378 ಜನರಿಗೆ ಸಂಬಂಧಿಸಿದ 318–19 ಎಕರೆ ಜಮೀನ್ನು ಕಂದಾಯ ಇಲಾಖೆಗೆ ಬಿಡುಗಡೆ ಮಾಡಲು ಜಿಲ್ಲಾಧಿಕಾರಿಯವರ ಪತ್ರ ಸಂ:ಎಂ4ಎಲ್‌ಎನ್‌ಡಿ/ಸಿಆರ್/299/2003–04 ದಿನಾಂಕ:2.1.2004ರ ಪ್ರಕಾರ ಸರ್ಕಾರದ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಯಾವುದೇ ಆದೇಶ ಸ್ವೀಕೃತವಾಗಿರುವುದಿಲ್ಲ.

ಇ) ಸಕ್ರಮಗೊಳಿಸಲು ಅರ್ಹವಾಗಿರುವ ಪ್ರಕರಣಗಳ ವಿವರ ಕೆಳಗಿನಂತಿದೆ:

ತಾಲ್ಲೂಕು	ಅನಧಿಕೃತ ಸಾಗುವಳಿ		ಅನಧಿಕೃತ ಮನೆ ನಿರ್ಮಾಣ		ಒಟ್ಟು	
	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ	ಸಂಖ್ಯೆ	ವಿಸ್ತೀರ್ಣ
ಶೃಂಗೇರಿ	92	98–10	32	0–35	124	99–05
ಮೂಡಿಗೆರೆ	167	370–00	55	2–21	222	372–21
ಕೊಪ್ಪ	35	54–18	18	0–18	53	54–36
ಒಟ್ಟು	**294**	**522–28**	**105**	**3–34**	**399**	**526–22**

ಅರ್ಹವಾದ ಒಟ್ಟು 105 ಅನಧಿಕೃತ ವಾಸದ ಮನೆ ನಿರ್ಮಾಣಗಳನ್ನು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 94–ಸಿ ಮೇರೆಗೆ ರಚಿತವಾದ ನಿಯಮಗಳ ಮೇರೆಗೆ ಸಕ್ರಮಗೊಳಿಸಿ ಹಕ್ಕು ಪತ್ರ ನೀಡಲಾಗಿರುತ್ತದೆ. 294 ಪ್ರಕರಣಗಳಿಗೆ ಸಂಬಂಧಿಸಿದ 522–28 ಎಕರೆ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಲು ಅರ್ಹವೆಂದು ಗುರುತಿಸಲಾಗಿದ್ದು, ಕಲಂ 94–ಬಿ ಪ್ರಕಾರ ಸಂಬಂಧಪಟ್ಟ ಅನಧಿಕೃತ ಸಾಗುವಳಿ ಸಕ್ರಮ ಸಮಿತಿಗಳ ಮೂಲಕ ಸಕ್ರಮಗೊಳಿಸಬೇಕಾಗಿರುತ್ತದೆ. ಈಗಾಗಲೇ ಅಕ್ರಮ ಸಕ್ರಮ ಸಮಿತಿಯ ಪುನರ್ ರಚನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದ್ದು, ಸಮಿತಿಯ ಪುನರ್ ರಚನೆಯ ನಂತರ ಸಕ್ರಮಗೊಳಿಸಲು ಕ್ರಮ ವಹಿಸಲಾಗುವುದು.

ಈ) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕುದುರೆಮುಖ ವನ್ಯಜೀವಿ ವಿಭಾಗ, ಕಾರ್ಕಳ ಇವರು ಸಲ್ಲಿಸಿರುವ ವರದಿ ಪ್ರಕಾರ ಕುದುರೆಮುಖ ರಾಷ್ಟ್ರೀಯ ಉದ್ಯಾನವನ ವ್ಯಾಪ್ತಿಯ ಖಾಸಗಿ ಹಿಡುವಳಿ ಜಮೀನುಗಳ ಭೂ ಸ್ವಾಧೀನ ಮತ್ತು ಸಂತ್ರಸ್ತ ಕುಟುಂಬಗಳಿಗೆ ಪುನರ್ ವಸತಿ ಕಲ್ಪಿಸುವ ಬಗ್ಗೆ ಯೋಜನಾ ವರದಿ ತಯಾರಿಸಿ ಅನುಮೋದನೆ ಹಾಗೂ ಅನುದಾನದ ಬಿಡುಗಡೆಗಾಗಿ ಸರ್ಕಾರದ ಅರಣ್ಯ ಇಲಾಖೆಯ ಪತ್ರದ ಸ:ಎಫ್ಇಇ 94 ಎಫ್ ಡಬ್ಲ್ಯೂಎಲ್ 2002 ದಿನಾಂಕ:3.2.2004ರ ಪ್ರಕಾರ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿರುತ್ತದೆ.

2113 (3076) ಶ್ರೀ ಕೃಷ್ಣಪಾಲೇಮಾರ್ .ಜೆ (ಸುರತ್ಕಲ್): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2003–04 ಹಾಗೂ 2004–05ನೇ ಸಾಲಿನಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಹಮ್ಮಿಕೊಂಡ ಕಾರ್ಯಕ್ರಮಗಳು ಯಾವುವು;

ಆ) ಪ್ರವಾಸಿ ತಾಣಗಳ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಸದರಿ ಸಾಲಿನಲ್ಲಿ ಒದಗಿಸಿದ ಹಾಗೂ ಖರ್ಚು ಮಾಡಿದ ಹಣ ಎಷ್ಟು;